ಈ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ಕಾಮಗಾರಿಯ ನಿರ್ವಹಣೆಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ನಿವೇಶನ ಹಾಗೂ ಕಟ್ಟಡಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಖಾತೆ ಪಡೆಯಲು ಅಭಿವೃದ್ಧಿ ಶುಲ್ಕ ಪದ್ಧತಿ

2540(3133) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಂದಾಯ ನಿವೇಶನ ಹಾಗೂ ಕಟ್ಟಡಗಳಿಗೆ ನಗರದ ಸ್ಥಳೀಯ ಸಂಸ್ಥೆಗಳಲ್ಲಿ ಖಾತೆ ಪಡೆಯಲು ಅಭಿವೃದ್ಧಿ ಶುಲ್ಕ ಪದ್ಧತಿಯನ್ನು ಜಾರಿಗೆ ತಂದದ್ದು ಯಾವಾಗ;

ಆ) ಈ ಪದ್ಧತಿಯನ್ನು ರದ್ದುಗೊಳಿಸಲಾಗಿದೆಯೇ; ಹಾಗಿದ್ದಲ್ಲಿ ಕಾರಣಗಳೇನು;

ಇ) ಈ ಪದ್ಧತಿಯನ್ನು ರದ್ದುಪಡಿಸಿರುವುದರಿಂದ ಬೆಂಗಳೂರು ವ್ಯಾಪ್ತಿಯ ನಗರಪ್ರದೇಶಗಳ ಆದಾಯಕ್ಕೆ ತೊಂದರೆಯಾಗಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಪುನಃ ಈ ಪದ್ಧತಿಯನ್ನು ಜಾರಿಗೆ ತರಲು ಸರ್ಕಾರದ ನಿಲುವೇನು?

ಶ್ರೀ ಡಿ.ಕೆ. ಶಿವಕುಮಾರ (ನಗರಾಭಿವೃದ್ಧಿ ಸಚಿವರು) :

ಅ) ನವಂಬರ್ 1996

ಆ) ಹೌದು.

ಸುತ್ತೋಲೆ ಸಂ: ನಇ: 10:ಟಿಸಿಬಿ: 2003, ದಿನಾಂಕ : 25.3.2003 ರನ್ವಯ ಅಭಿವೃದ್ಧಿ ಶುಲ್ಕವನ್ನು ಕರ್ನಾಟಕ ಪುರಸಭೆ 1964ರ ಕಲಂ 160ರ ವ್ಯಾಪ್ತಿಗೆ ಒಳಪಡುವ ಭೂಮಿ ಹೊರತುಪಡಿಸಿ, ಉಳಿದ ಯಾವುದೇ ಖಾಸಗಿ ಭೂಮಿಗೆ ಅಭಿವೃದ್ಧಿ ಶುಲ್ಕವನ್ನು ವಸೂಲಿ ಮಾಡಲು ಕರ್ನಾಟಕ ಪುರಸಭಾ ಕಾಯ್ದೆಯಲ್ಲಿ ಅವಕಾಶವಿಲ್ಲದ್ದರಿಂದ, ಮತ್ತು ಕರ್ನಾಟಕ ಗ್ರಾಮಾಂತರ ನಗರ ಯೋಜನೆ ಕಾಯ್ದೆ 1961 ಕಲಂ 18 ರಂತೆ ಈ ಶುಲ್ಕವನ್ನು ವಸೂಲು ಮಾಡುವ ಅಧಿಕಾರ ಯೋಜನಾ ಪ್ರಾಧಿಕಾರಗಳಿಗಿರುವುದರಿಂದ, ಸದರಿ ಸುತ್ತೋಲೆಯನ್ನು ರದ್ದುಪಡಿಸಲಾಗಿದೆ.

ಇ) ಕಾಯ್ದೆಯಂತೆ ಯಾವುದಾದರೊಂದು ಸಂಸ್ಥೆಯು ಅಭಿವೃದ್ಧಿ ಶುಲ್ಕವನ್ನು ಸಂಗ್ರಹಿಸಬೇಕಾಗಿರುವುದರಿಂದ, ಆದಾಯಕ್ಕೆ ತೊಂದರೆಯಾಗಿದೆ ಎನ್ನಲಾಗುವುದಿಲ್ಲ.

ಈ) ಕಾನೂನಿನಲ್ಲಿ ಅವಕಾಶವಿಲ್ಲವಾದುದರಿಂದ, ಜಾರಿಗೆ ತರಲು ಸಾಧ್ಯವಿಲ್ಲ.

ಸಕ್ಕರೆ ಕಾರ್ಖಾನೆಗಳಿಂದ ಇಂಧನವನ್ನು ಹೆಚ್ಚಿನ ದರದಲ್ಲಿ ಖರೀದಿಸುವುದು

2541(3134) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಖರೀದಿಗೆ ಕ್ರೆಸಿಲ್ (CRISIL) ಸಂಸ್ಥೆ ಯಾವ ದರವನ್ನು ನಿಗದಿ ಮಾಡಿತ್ತು; ವಾಸ್ತವಿಕವಾಗಿ ಈಗ ಯಾವ ದರದಲ್ಲಿ ವಿದ್ಯುತ್ ಖರೀದಿಸಲಾಗುತ್ತಿದೆ;

ಆ) ಹೆಚ್ಚುವರಿ ದರ ನಿಗದಿ ಪಡಿಸಿದ್ದರೆ ಅದಕ್ಕೆ ಕಾರಣಗಳೇನು; ಕಳೆದ ಮೂರು ವರ್ಷದಿಂದ ಈವರೆಗೆ ಪಾವತಿಯಾದ ಹೆಚ್ಚುವರಿ ಹಣ ಎಷ್ಟು;

ಇ) ಹೆಚ್ಚುವರಿ ದರ ನಿಡಿ ನಷ್ಟ ಆಗಿದ್ದರ ಬಗ್ಗೆ ಮಹಾ ಲೆಕ್ಕಪರಿಶೋಧಕರು ಮತ್ತು ನಿಯಂತ್ರಕರು ವರದಿ ನೀಡಿದ್ದಾರೆಯೆ;

ಈ) ಹೆಚ್ಚುವರಿ ದರ ಪಾವತಿಸಿದ ಅಧಿಕಾರಿಯ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಬಸವರಾಜ ಪಾಟೀಲ (ಇಂಧನ ರಾಜ್ಯ ಸಚಿವರು) :

ಅ) ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಖರೀದಿಸಲು ಕ್ರೆಸಿಲ್ ಸಂಸ್ಥೆಯು ಯಾವ ದರವನ್ನು ನಿಗದಿಪಡಿಸಿಲ್ಲ. ವಿದ್ಯುತ್ ದರಗಳ ನಿಗದಿಪಡಿಸುವಿಕೆ ಬಗ್ಗೆ ಕೆಲವು ತತ್ವಗಳನ್ನು ಸೂಚಿಸಿತ್ತು. ಮಾನ್ಯ ಮಾಡಿರುವ ವಿದ್ಯುತ್ ಖರೀದಿ ಒಪ್ಪಂದಗಳಿಗೆ ಸಂಬಂಧಿಸಿದ ಕೋ-ಜನರೇಷನ್ ಯೋಜನೆಗಳಿಂದ MINES ದರದಲ್ಲಿ ವಿದ್ಯುತ್ತನ್ನು 2002-03 ರಲ್ಲಿದ್ದಂತೆ ಪ್ರತಿ ಯೂನಿಟ್ಟಿಗೆ ರೂ. 3.32 ದರದಲ್ಲಿ ಖರೀದಿಸಲಾಗುತ್ತಿದೆ.

ಆ) ಪ್ರಶ್ನೆ (ಅ)ಗೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಸಾರಿಗೆ ಇಲಾಖೆಯ ಕಛೇರಿಗಳಿಗೆ ಲೋಕಾಯುಕ್ತರ ಧಾಳಿ

2542(3135) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸಾರಿಗೆ ಇಲಾಖೆಯ ವಿವಿಧ ಕಛೇರಿ ಮೇಲೆ ಲೋಕಾಯುಕ್ತ ಧಾಳಿಯು ರಾಜ್ಯದಲ್ಲಿ ಎಲ್ಲೆಲ್ಲಿ ನಡೆದಿದೆ;

ಆ) ಎಷ್ಟು ಪ್ರಕರಣಗಳಲ್ಲಿ ಕೇಸು ದಾಖಲಿಸಲಾಗಿದೆ; ಈ ಮೂಲಕ ವಶಪಡಿಸಿಕೊಂಡ ವಸ್ತುಗಳೇನು;

ಇ) ಧಾಳಿ ಸಂದರ್ಭದಲ್ಲಿ ಪತ್ತೆಹಚ್ಚಿದ ದೋಷಗಳೇನು;

ಈ) ರಾಜ್ಯದಲ್ಲಿ ಒಟ್ಟು ದಾಖಲಾದ ಕೇಸುಗಳ ಪೈಕಿ ಎಷ್ಟನ್ನು ಇತ್ಯರ್ಥಪಡಿಸಲಾಗಿದೆ;

ಉ) ಇವುಗಳಲ್ಲಿ ಶಿಕ್ಷೆಗೊಳಗಾದವರ ಸಂಖ್ಯೆ ಎಷ್ಟು; ಯಾವ ಯಾವ ತಪ್ಪಿಗೆ ಯಾವ ಶಿಕ್ಷೆ ವಿಧಿಸಲಾಗಿದೆ; ಎವರ ನೀಡುವುದು?

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ಸಾರಿಗೆ ಇಲಾಖೆಯ ಬೆಂಗಳೂರು (ದಕ್ಷಿಣ), ಚಿತ್ರದುರ್ಗ ಮತ್ತು ದಾವಣಗೆರೆ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಲೋಕಾಯುಕ್ತ ಧಾಳಿ ನಡೆದಿದೆ.

ಆ) ಒಂದು ಪ್ರಕರಣದಲ್ಲಿ ಕೇಸು ದಾಖಲಾಗಿದೆ. ದಾಖಲಾತಿಗಳನ್ನು, ಭಾವಚಿತ್ರಗಳನ್ನು ಮತ್ತು ಹಣವನ್ನು ಸಹ ವಶಪಡಿಸಿಕೊಂಡಿರುವುದು ಅವರ ವರದಿಯಿಂದ ಕಂಡುಬಂದಿದೆ.

ಇ) ಒಂದು ಪ್ರಕರಣದಲ್ಲಿ ಮಾತ್ರ ಸರ್ಕಾರಿ ಹಣವನ್ನು ತಾತ್ಕಾಲಿಕವಾಗಿ ದುರುಪಯೋಗಪಡಿಸಿಕೊಳ್ಳಲಾಗಿದೆ ಎಂಬುದು ತಿಳಿಯಪಡಿಸಲಾಗಿದೆ.

ಈ) ಯಾವುದೇ ಪ್ರಕರಣ ಇತ್ಯರ್ಥವಾಗಿರುವುದಿಲ್ಲ.

ಉ) ಒಟ್ಟು ಎಂಟು ಜನ ಅಧಿಕಾರಿ/ನೌಕರರನ್ನು ಅಮಾನತ್ತಿನಲ್ಲಿಡಲಾಗಿದೆ.

ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಏತ ನೀರಾವರಿ ಯೋಜನೆಗಳು

2543(3136) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ;